## ಕರ್ನಾಟಕ ಸರ್ಕಾರ

1. ಮಾನ್ಯ ವಿಧಾನ ಪರಿಷತ್ತು ಸದಸ್ಯರು: ಶ್ರೀ ಶರವಣ ಟಿ.ಎ. (ವಿಧಾನ ಸಭೆಯಿಂದ ಚುನಾಯಿತರಾದವರು)
2. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 789
3. ಉತ್ತರಿಸಬೇಕಾದ ದಿನಾಂಕ: 13.03.2025
4. ಉತ್ತರಿಸಬೇಕಾದವರು: ಮಾನ್ಯ ಮುಖ್ಯಮಂತ್ರಿಗಳು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನ ಮತ್ತು ನಿರ್ವಹಣೆಯನ್ನು ಯಾರು ಮಾಡುತ್ತಿದ್ದಾರೆ; | (i) ಆರ್ಥಿಕ ಇಲಾಖೆಯಿಂದ ಶಕ್ತಿ, ಗೃಹಲಕ್ಷ್ಮೀ, ಗೃಹಜ್ಯೋತಿ ಮತ್ತು ಅನ್ನಭಾಗ್ಯ ಯೋಜನೆಗಳ ಮೌಲ್ಯಮಾಪನವನ್ನು ಮಾಡಲು M/s M2M Media Network LLP, Bengaluru ರವರಿಗೆ 2023-24 ರಲ್ಲಿ ವಹಿಸಲಾಗಿರುತ್ತದೆ.<br><br>(ii) ಮುಂದುವರೆದು, ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯ ಮಾಪನವನ್ನು ವಿತ್ತೀಯ ಕಾರ್ಯನೀತಿ ಸಂಸ್ಥೆಯಿಂದ ಈ ಕೆಳಕಂಡ 04 ಸಂಸ್ಥೆಗಳಿಗೆ ನೀಡಲಾಗಿದೆ.<br>1. ಮುಂಬಯಿ ಮೂಲದ XKDR Forum.<br>2. ಕಿಂಗ್ಸ್ ಕಾಲೇಜ್ ಲಂಡನ್‌ನ ಕಾನೂನು ಮತ್ತು ಸಾಮಾಜಿಕ ನ್ಯಾಯ ವಿಭಾಗದ ಪ್ರಾಧ್ಯಾಪಕಿ ಪ್ರೊ. ಪ್ರಭಾ ಕೋಟೇಶ್ವರನ್.<br>3. ಇಂಡಸ್ ಆಕ್ಷನ್ ಸಂಸ್ಥೆಯ ತಾರಾ ಕೃಷ್ಣಸ್ವಾಮಿ.<br>4. ಅಜೀಂ ಪ್ರೇಮ್ ಜಿ ವಿಶ್ವವಿದ್ಯಾಲಯ.<br>5. ಜಸ್ಟ್ ಜಾಬ್ ನೆಟ್ವರ್ಕ್(ಶಕ್ತಿ ಯೋಜನೆ). |
| (ಆ) | ಕಳೆದ ಎರಡು ವರ್ಷಗಳಿಂದ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಮೌಲ್ಯಮಾಪನ ಮತ್ತು ನಿರ್ವಹಣೆಯನ್ನು ಮಾಡಲು ಟೆಂಡರ್ ಕರೆಯಲಾಗಿತ್ತೆ; (ಸಂಪೂರ್ಣ ಮಾಹಿತಿ ನೀಡುವುದು) | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ 4(ಜಿ) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದನ್ವಯ ಸರ್ಕಾರದಿಂದ KTPP ಕಾಯ್ದೆಯಿಂದ ವಿನಾಯಿತಿಯನ್ನು ನೀಡಿರುವುದರಿಂದ ಟೆಂಡರ್ ಕರೆಯಲಾಗಿರುವುದಿಲ್ಲ. |

| | | |
|---|---|---|
| (ಇ) | ಟೆಂಡರ್ ಕರೆಯದೇ ಇದ್ದಲ್ಲಿ, ಖಾಸಗಿ ಸಂಸ್ಥೆಯು ನೀಡಿದ್ದ ಪ್ರಸ್ತಾವನೆಯನ್ನು ಒಪ್ಪಿಕೊಂಡು ಕಾರ್ಯಾದೇಶ ನೀಡಲು ಕಾರಣಗಳೇನು; | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮದಡಿ ಪ್ರತಿಷ್ಠಿತ ಸಂಸ್ಥೆಗಳಿಗೆ 4(ಜಿ) ರನ್ವಯ ನಿರ್ದಿಷ್ಟ ಸಂಗ್ರಹಣೆಗಳಿಗೆ KTPP ಕಾಯ್ದೆಯಿಂದ ವಿನಾಯಿತಿಯನ್ನು ನೀಡಲು ಅವಕಾಶವಿದ್ದು, ಅದರಂತೆ ಪರಿಶೀಲಿಸಿ ವಿನಾಯಿತಿಯನ್ನು ನೀಡಲಾಗಿರುತ್ತದೆ. |
| (ಈ) | ಸದರಿ ಸಂಸ್ಥೆಗೆ ಕಳೆದ ಎರಡು ವರ್ಷಗಳಿಂದ ಪಾವತಿ ಮಾಡಿರುವ ಮೊತ್ತ ಎಷ್ಟು? (ಸಂಪೂರ್ಣ ವಿವರ ನೀಡುವುದು) | (i) M/s M2M Media Network LLP, Bengaluru ಸಂಸ್ಥೆಯಿಂದ ಮೌಲ್ಯಮಾಪನ ಮಾಡಿರುವ ಕುರಿತು ಜಿಎಸ್‌ಟಿ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ 29.50 ಲಕ್ಷಗಳು, ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 29.50 ಲಕ್ಷಗಳು, ಸಾರಿಗೆ ಇಲಾಖೆಯಿಂದ 26.50 ಲಕ್ಷ ಹಾಗೂ ಇಂಧನ ಇಲಾಖೆಯಿಂದ 25.366 ಲಕ್ಷಗಳನ್ನು ಪಾವತಿಸಲಾಗಿದೆ.<br><br>(ii) ಮುಂದುವರೆದು, ವಿತ್ತೀಯ ಕಾರ್ಯನೀತಿ ಸಂಸ್ಥೆಯಿಂದ ನಾಲ್ಕು ಸಂಸ್ಥೆಗಳೊಂದಿಗೆ ಒಪ್ಪಂದ (MoU) ಮಾಡಿಕೊಂಡಿದ್ದು, XKDR Forum ಅನ್ನು ಹೊರತುಪಡಿಸಿ ಇನ್ನುಳಿದ ಮೂರು ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಯಾವುದೇ ಆರ್ಥಿಕ ಸಹಾಯ ನೀಡುತ್ತಿಲ್ಲ.<br><br>(iii) ಒಪ್ಪಂದ (MoU)ದನ್ವಯ XKDR Forum ಗೆ ಒಂದು ವರ್ಷದ ಅವಧಿಗೆ ಸಂಸ್ಥೆಯ ಸೇವೆಯನ್ನು ರೂ.103.44 ಲಕ್ಷಗಳು + ಜಿ.ಎಸ್.ಟಿ ಗಳ ವೆಚ್ಚದಲ್ಲಿ ಪಡೆಯಲು ಅವಕಾಶ ಕಲ್ಪಿಸಿದ್ದು, ಸಂಸ್ಥೆಯು ಪ್ರತಿ 4 ತಿಂಗಳಿಗೊಮ್ಮೆ ಒಂದು ವರದಿಯಂತೆ ಒಟ್ಟು 03 ವರದಿಯನ್ನು ಸಲ್ಲಿಸಬೇಕಾಗಿದ್ದು, ಪ್ರತಿ ವರದಿ ಸಲ್ಲಿಸಿದ ನಂತರ ರೂ. 40.68ಲಕ್ಷ (ಎಲ್ಲ |

| | | |
|---|---|---|
| | | ತೆರಿಗೆಗಳು ಒಳಗೊಂಡಂತೆ) ಗಳನ್ನು ಒಪ್ಪಂದದ (MoU) ಪ್ರಕಾರ ಪಾವತಿಸಬೇಕಾಗಿರುತ್ತದೆ.<br>ಸಂಸ್ಥೆಯು ಇಲ್ಲಿಯವರೆಗೆ ಒಟ್ಟು 02 ವರದಿಗಳನ್ನು ಸಲ್ಲಿಸಿರುತ್ತಾರೆ. ಸಲ್ಲಿಸಿರುವ ವರದಿಗಳು ಪರಿಶೀಲನಾ ಹಂತದಲ್ಲಿದೆ. ಇದುವರೆವಿಗೂ ಯಾವುದೇ ಮೊತ್ತ ಪಾವತಿಸಿರುವುದಿಲ್ಲ. |

ಸಂಖ್ಯೆ: ಆಇ 7 ಸಾವಿಯೋ 2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ